# ಮಧ್ಯಮ ವರ್ಗ

'ಮನುಷ್ಯ ಜಾತಿ ತಾನೊಂದೆ...' ಎಂಬುದು ಆದಿಕವಿ ಪಂಪನ ಪ್ರಸಿದ್ಧ ಹೇಳಿಕೆ. ಮನುಷ್ಯರಲ್ಲಿ ಮೇಲು, ಕೀಳು ಎಂಬುದಿಲ್ಲ ಎಂಬ ಪಂಪನ ಅಭಿಪ್ರಾಯ ಭಾರತೀಯ ವರ್ಣವ್ಯವಸ್ಥೆಯಲ್ಲಿನ ತರತಮ ಭಾವವನ್ನು ಕುರಿತ ಪ್ರತಿಕ್ರಿಯೆ. ಅದರ ಹಿಂದೆ ಮನುಷ್ಯರೆಲ್ಲರೂ ಎಲ್ಲ ದೃಷ್ಟಿಯಿಂದಲೂ ಸಮಾನರು ಎಂಬ ಧ್ವನಿಯೂ ಇದೆ. ಆದರೆ ಇದೊಂದು ಆದರ್ಶವೇ ವಿನಾ ವಾಸ್ತವವಲ್ಲ. ಏಕೆಂದರೆ, ನಾಗರಿಕ ಮಾನವ ಸಮುದಾಯವನ್ನು ಜಾತಿ, ಆರ್ಥಿಕಮಟ್ಟ, ಲಿಂಗ– ಇತ್ಯಾದಿಗಳ ಆಧಾರದ ಮೇಲೆ ಸ್ತರ ವಿಂಗಡಣೆ (Stratification) ಮಾಡಲಾಗುತ್ತಿರುವುದನ್ನು ಸಮಾಜಶಾಸ್ತ್ರಜ್ಞರು ಗಮನಿಸಿದ್ದಾರೆ. ಹುಟ್ಟಿರುವ ಜಾತಿಯ ಕಾರಣದಿಂದ ಮನುಷ್ಯನನ್ನು ಶ್ರೇಷ್ಠ, ನಿಕೃಷ್ಟ ಎಂದು ಪರಿಗಣಿಸುವ ಮನೋಧರ್ಮ ಭಾರತೀಯರಲ್ಲಿ ಈಗಲೂ ಇದೆ. ಪುರುಷ ಹಾಗೂ ಸ್ತ್ರೀ ಎಂಬ ಲಿಂಗಾಧಾರಿತ ದೃಷ್ಟಿಕೋನದಿಂದಲೂ ತರತಮಭಾವದ ವರ್ಗೀಕರಣವಿದೆ. ಎಲ್ಲಕ್ಕೂ ಮಿಗಿಲಾಗಿ ಅರ್ಥಿಕ ಮಟ್ಟಕ್ಕೆ ಅನುಗುಣವಾಗಿ ಜನಸಮುದಾಯವನ್ನು ಮೇಲ್ವರ್ಗ, ಮಧ್ಯಮವರ್ಗ, ಕೆಳವರ್ಗ ಎಂಬ ಮೂರು ಗುಂಪುಗಳಲ್ಲಿ ವಿಂಗಡಿಸುವ ಪದ್ಧತಿ ಸಾರ್ವತ್ರಿಕವಾಗಿದೆ. ಜಾತಿ, ಲಿಂಗ ಮುಂತಾದವುಗಳ ಆಧಾರದ ಮೇಲಿನ ವರ್ಗೀಕರಣವನ್ನು ನಿವಾರಿಸಿಕೊಳ್ಳಬಹುದಾದರೂ, ಆರ್ಥಿಕ ಹಿನ್ನೆಲೆಯಲ್ಲಿನ ವರ್ಗೀಕರಣ ಅನಿವಾರ್ಯವೆನ್ನುವಂಥ ಕಾಲಘಟ್ಟದಲ್ಲಿ ನಾವಿದ್ದೇವೆ. ಆರ್ಥಿಕ ಅಸಮಾನತೆಯೇ ಸಾಮಾಜಿಕ ಕ್ಷೋಭೆಗೆ ಬಹಳಷ್ಟು ಬಾರಿ ಕಾರಣವಾಗುತ್ತದೆ ಎನ್ನುವುದು ಐತಿಹಾಸಿಕ ಸತ್ಯ. ಕಮ್ಯುನಿಸ್ಟ್ ಪ್ರಣಾಳಿಕೆಯ ಮೊದಲವಾಕ್ಯವೇ– 'The history of all hither to existing societies is the history of class struggle' ಎಂದಿರುವುದು ಈ ಕಾರಣಕ್ಕಾಗಿಯೇ.

ಕಮ್ಯುನಿಸ್ಟ್ ಸಿದ್ಧಾಂತದ ಪ್ರವರ್ತಕ ಕಾರ್ಲ್‌ಮಾರ್ಕ್ಸ್ ಜನ ಸಮುದಾಯವನ್ನು ಉಳ್ಳವರು ಹಾಗೂ ಇಲ್ಲದವರು ಎಂಬ ಎರಡೇ ಗುಂಪುಗಳಲ್ಲಿ ವಿಂಗಡಿಸಿದ್ದಾನೆ. ಆದರೆ ವಾಸ್ತವವಾಗಿ– ಉಳ್ಳವರೆಂಬ ಮೇಲ್ವರ್ಗ, ಇಲ್ಲದವರೆಂಬ ಕೆಳವರ್ಗಗಳ ನಡುವೆ ಮೇಲೂ ಏರದ, ಕೆಳಗೂ ಇಳಿಯದ ಮಧ್ಯಮ ವರ್ಗವೆಂಬ ಸಮುದಾಯವೊಂದಿದೆ. ಈ ಮಧ್ಯಮ ವರ್ಗದವರದು ಒಂದು ಬಗೆಯ 'ತ್ರಿಶಂಕು ಸ್ಥಿತಿ' ಎನ್ನಬಹುದು. ರಾಮಾಯಣದಲ್ಲಿ ಬರುವ ಶುನಶ್ಶೇಪನ ವೃತ್ತಾಂತ ಎಲ್ಲರಿಗೂ ತಿಳಿದಿರುವಂಥದು. ಶುನಶ್ಶೇಪ, ಋಚೀಕ ಋಷಿಯ ಮಧ್ಯಮ ಪುತ್ರ. ತನ್ನ ಮೂವರು ಮಕ್ಕಳಲ್ಲಿ ಋಚೀಕನಿಗೆ ಹಿರಿಯಾತನ ಬಗ್ಗೆ ಅಭಿಮಾನ; ತಾಯಿಗೆ ಕಿರಿಯವನನ್ನು ಕುರಿತು ವಿಶೇಷ ಪ್ರೀತಿ. ಹೀಗಾಗಿ ತಂದೆ ತಾಯಿಗಳಿಬ್ಬರಿಗೂ ಬೇಡವೆನ್ನಿಸಿದ ಶುನಶ್ಶೇಪ, ಹರಿಶ್ಚಂದ್ರನ ಯಜ್ಞಕ್ಕೆ ಯಜ್ಞಪಶುವಾಗಿ ತನ್ನನ್ನೇ ತಾನು ಮಾರಿಕೊಳ್ಳುತ್ತಾನೆ. ಮಧ್ಯಮ ವರ್ಗದವರ ಪಾಡು ಶುನಶ್ಶೇಪನಂತೆನ್ನಬಹುದು. ಅವರು ಅಲಕ್ಷಿತರು. ಮೇಲ್ವರ್ಗದವರಿಗೆ ಆಳುವವರನ್ನು ನಿರ್ದೇಶನ ಮಾಡುವ ಆರ್ಥಿಕ ಸಾಮರ್ಥ್ಯವಿರುತ್ತದೆ; ಕೆಳವರ್ಗದವರಿಗೆ ಬಂಡಾಯ, ಹಕ್ಕೊತ್ತಾಯಗಳ ಮೂಲಕ ತಮಗೆ ಬೇಕಾದುವನ್ನು ದಕ್ಕಿಸಿಕೊಳ್ಳುವ ಛಲವಿರುತ್ತದೆ. ಆದರೆ ಮಧ್ಯಮ ವರ್ಗದವರಿಗೆ ಈ ಯಾವ ಸೌಲಭ್ಯಗಳೂ ಇಲ್ಲ. ಅವರದು ಕ್ಷೀಣಧ್ವನಿ. ರಾಜಕಾರಣಿಗಳು ತಮ್ಮ ಸ್ಥಾನ ಭದ್ರತೆಗಾಗಿ ಮೇಲ್ವರ್ಗವನ್ನು ಓಲೈಸುತ್ತಾರೆ; ಆಮಿಷಗಳ ಮೂಲಕ ಕೆಳವರ್ಗವನ್ನು ಒಲಿಸಿಕೊಳ್ಳುತ್ತಾರೆ. ಮಧ್ಯಮವರ್ಗದತ್ತ ಅವರ ಕೃಪಾದೃಷ್ಟಿ ಬೀಳುವುದು ತೀರಾ ಅಪರೂಪ. ಅಲ್ಲದೆ ಮಧ್ಯಮ ವರ್ಗದ ಮಂದಿಗೆ ಇತರರತ್ತ ಕೈ ಚಾಚಬಾರದೆನ್ನುವ ಆತ್ಮಾಭಿಮಾನವಿರುತ್ತದೆ. ಹೀಗಾಗಿ ಇದ್ದುದರಲ್ಲಿ ತೃಪ್ತಿ ಪಟ್ಟುಕೊಂಡು ಬದುಕಲು ಅವರು ನಿರಂತರ ಹೋರಾಡುತ್ತಾರೆ.

ನಮ್ಮ ಜನಪ್ರಿಯ ಕವಿ ಬಿ.ಆರ್. ಲಕ್ಷ್ಮಣರಾವ್ ಅವರು 'ಮಧ್ಯಸ್ಥ' ಎಂಬ ಕವಿತೆಯೊಂದರಲ್ಲಿ ಮಧ್ಯಮ ವರ್ಗದವರ ಪಾಡನ್ನು ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಬಸ್ಸಿನಲ್ಲಿ ಪ್ರಯಾಣಿಸಬೇಕಾದ ಒಂದು ಸಂದರ್ಭದಲ್ಲಿ ಕವಿಗೆ ಆದ ಅನುಭವವೇ ಕವಿತೆಯ ವಸ್ತು. ಮೂವರು ಕುಳಿತುಕೊಳ್ಳಬಹುದಾದ ಸೀಟಿನಲ್ಲಿ ಕವಿಗೆ ಲಭಿಸಿದ್ದು ಮಧ್ಯದ ಜಾಗ. ಅವರ ಬಲಕ್ಕೆ ಒಬ್ಬ ಶ್ರೀಮಂತ ಧಡೂತಿ ಮನುಷ್ಯ; ಎಡಕ್ಕೆ ಕುರುಚಲು ಗಡ್ಡದ ಕೆದರು ಕೂದಲ ಯುವಕ. ಅರ್ಥಾತ್– ಒಂದು ಕಡೆ ದರ್ಪ, ಇನ್ನೊಂದು ಕಡೆ ಆಕ್ರೋಶ! ನಡುವೆ ಇರುವ ಕವಿ ಎರಡನ್ನೂ ಸಹಿಸಿಕೊಳ್ಳಬೇಕಾದ ಮಧ್ಯಮವರ್ಗದ ಪ್ರತಿನಿಧಿ. ಆದಾಗ್ಯೂ ಕವಿ ಪರಿಸ್ಥಿತಿಯೊಂದಿಗೆ ರಾಜಿ ಮಾಡಿಕೊಳ್ಳುತ್ತಾರೆ. 'ಕಿಟಕಿ ಬಡಿಯುವುದಿಲ್ಲ; ಜೋಲಿ ತಪ್ಪುವುದಿಲ್ಲ; ಎರಡೂ ಕಡೆಗಿದೆ ಆಧಾರ!' ಎಂದು ಇದ್ದುದರಲ್ಲೇ ತೃಪ್ತಿಯನ್ನರಸುತ್ತಾರೆ. ಇದು ಮಧ್ಯಮ ವರ್ಗಕ್ಕೇ ವಿಶಿಷ್ಟವಾದ ಮನೋಧರ್ಮ!

■ ವೈನತೇಯ

## ಮಾತೇ ಮುತ್ತು

★ ಸಜ್ಜನರ ಮಾರ್ಗವನ್ನು ಪೂರ್ಣವಾಗಿ ಅನುಸರಿಸಲು ಒಂದು ವೇಳೆ ಶಕ್ಯವಾಗದೆ ಹೋದರೆ ಸ್ವಲ್ಪವನ್ನಾದರೂ ಅನುಸರಿಸಬೇಕು. ಸರಿಯಾದ ಹಾದಿಯಲ್ಲಿರುವವನು ನಾಶ ಹೊಂದುವುದಿಲ್ಲ.

– ಸುಭಾಷಿತ

★ ಕ್ಷಮಾಶೀಲರಲ್ಲಿ ಒಂದು ದೋಷ ಉಂಟು! ಅದೇನೆಂದರೆ ಕ್ಷಮಾಶೀಲನನ್ನು ಜನರು ಅಸಮರ್ಥನೆಂದು ತಿಳಿಯುತ್ತಾರೆ. ಆದರೆ ಆ ದೋಷವು ಗಣನೆಗೆ ಅರ್ಹವಲ್ಲ, ಕ್ಷಮೆಯೇ ಉತ್ತಮ ಬಲ. ಅಶಕ್ತರಿಗೆ ಅದು ಗುಣ, ಶಕ್ತರಿಗೆ ಭೂಷಣ.

–ಮಹಾಭಾರತ

★ಮಕ್ಕಳು, ಹೆಂಡತಿ, ಮಿತ್ರರು ಮತ್ತು ಧನಗಳಲ್ಲಿ ಅತಿಯಾದ ವ್ಯಾಮೋಹ ಇರಬಾರದು. ಅವರೆಲ್ಲರ ಅಗಲಿಕೆ ನಿಶ್ಚಿತ.

–ರಾಮಾಯಣ

★ ಮೊಸಳೆಯು ತನ್ನ ಸ್ಥಳದಲ್ಲಿದ್ದಾಗ(ನೀರಿನಲ್ಲಿ) ಆನೆಯನ್ನಾದರೂ ಸೆಳೆದುಕೊಳ್ಳುತ್ತದೆ. ಅದೇ ನೆಲೆ ತಪ್ಪಿದರೆ (ದಡಕ್ಕೆ ಬಂದರೆ) ನಾಯಿಯಿಂದಲೂ ತಿರಸ್ಕರಿಸಲ್ಪಡುತ್ತದೆ.

ಪಂಚತಂತ್ರ

★ ವ್ಯಕ್ತಿಯಾದವನು ತನ್ನನ್ನು ತಾನು ತಿದ್ದಿಕೊಳ್ಳುವುದು ಮೊದಲ ಕೆಲಸ.

–ಬರ್ನಾರ್ಡ್‌ಶಾ

★ ಆಸೆ ಅನುಭವವನ್ನು ಗೆಲ್ಲುತ್ತದೆ; ಎರಡನೆಯ ಮದುವೆ ಮಾಡಿಕೊಳ್ಳುವುದು ಇದಕ್ಕೊಂದು ನಿದರ್ಶನ.

– ಸ್ಯಾಮುಯಲ್ ಜಾನ್ಸನ್

★ ಉದಾರತೆಯ ಹಿಂದೆ ಮೆಚ್ಚುಗೆ ಮತ್ತು ಹೊಗಳಿಕೆ ಇರಬೇಕೆಂಬ ಉದ್ದೇಶ ಇರಬಾರದು. ಅದು ಸಹಜ ಗುಣವಾಗಿರಬೇಕು.

–ಹ್ಯೂಗ್ ಪ್ರಾಥರ್

★ ತಿಳಿಯದೆ ಯಾವುದನ್ನೂ ಸೇವಿಸಬೇಡಿ; ಓದದೆ ಯಾವುದಕ್ಕೂ ರುಜು ಹಾಕಬೇಡಿ.

–ಸ್ಪ್ಯಾನಿಶ್ ಗಾದೆ

★ ಊಟ ಮಾಡುವುದು ನಿನ್ನ ತೃಪ್ತಿಗಾಗಿ; ಉಡುಪು ಧರಿಸುವುದು ಅನ್ಯರ ತೃಪ್ತಿಗಾಗಿ!

–ಫ್ರಾಂಕ್ಲಿನ್

★ ಈ ಜಗತ್ತಿನಲ್ಲಿ ಒಳ್ಳೆಯದನ್ನು ಸಾಧಿಸುವುದು ನನ್ನಿಂದ ಸಾಧ್ಯವಿದೆ ಎಂಬುದಾಗಿ ಮನಃಪೂರ್ವಕವಾಗಿ ನಂಬಿದರೆ ಸಾಕು; ಅದಕ್ಕೆ ಪೂರಕವಾದ ಎಲ್ಲ ಶಕ್ತಿಗಳೂ ತಾವಾಗಿಯೇ ಒದಗುತ್ತವೆ.

–ಡೋರಾ ಅಲ್ಬರ್ಟ್

★ ಆಸಕ್ತಿ ಎಂಬ ಮದ್ಯವನ್ನು ಹೀರಿ, ಮೋಹವೆಂಬ ಔಷಧಿಯನ್ನು ನಾನು ಸೇವಿಸುತ್ತೇನೆ. ಆದುದರಿಂದ ನನ್ನ ಉತ್ಸಾಹ ಎಂದಿಗೂ ಕಡಿಮೆಯಾಗುವುದಿಲ್ಲ.

–ಎಚ್.ಜಿ.ವೆಲ್ಸ್

★ ಕೀರ್ತಿಯು ತಂತಾನೇ ಬರುವುದಿಲ್ಲ. ಅದು ವ್ಯಕ್ತಿಯ ದೃಢತೆಗೂ, ದುಡಿಮೆಗೂ ಸಿಕ್ಕುವ ಪ್ರತಿಫಲ.

–ಗ್ರೀಕ್ ಗಾದೆ

★ ನಮ್ಮಲ್ಲಿ ಬಡತನದ ರೇಖೆಯಿಂದ ಕೆಳಗಿಳಿಯುವವರ ಸಂಖ್ಯೆ ಅತ್ಯಲ್ಪ; ಇದು ಸಂತೋಷದಾಯಕ. ಆದರೂ ಬಡತನದ ರೇಖೆಯಿಂದ ಮೇಲೇರುವವರ ಸಂಖ್ಯೆಯೂ ಅತ್ಯಲ್ಪ; ಇದು ದುಃಖದಾಯಕ.

–ಜೆ.ಎಂ.ಬ್ಯಾರಿ